ಶ್ರೀ ಕೆ. ಯಂಕಟಪ್ಪ.—ಇಂಡೆಂಟ ಮಾಡಿದರೆ ಔಷಧಿ ಬರಲು ಆರು ತಿಂಗಳಾಗುವುದು. ಇದನ್ನು ಸರಿಪಡಿಸಲು ಏನು ಕ್ರಮ ತೆಗೆದುಕೊಳ್ಳಲಾಗಿದೆ ?

ಶ್ರೀ ಎಚ್. ಸಿದ್ದವೀರಪ್ಪ.—ಈ ಸಾರಿ ಯಾವ ರೀತಿ ಮಾಡಬೇಕೆಂದು ಸ್ಟೀಮಲ್ಟೇನ ಮಾಡಿದ್ದೇವೆ. ಸ್ಪೆಷಲ್ ಕಮಿಟಿ ಇದಕ್ಕಾಗಿ ಮಾಡಿ ಸ್ಟೀಮಲ್ಟೇನ ಮಾಡಬೇಕು. ಹಾಗೆ ಮಾಡಿ ಇಂಡೆಂಟ ಕೊಡಬೇಕು ಎಂದು ಮಾಡಿದ್ದೇವೆ. ಇದಕ್ಕಾಗಿ ಈ ವರ್ಷ 3 ಕೋಟಿ ರೂಪಾಯಿ ಮೊತ್ತಲಾಗಿದೆ. ಒಂದು ಕೋಟಿ ರೂಪಾಯಿ ಔಷಧಿಗಳನ್ನು ಅಲ್ಲಲ್ಲಿ ಆಸ್ಪತ್ರೆಗಳಿಗೆ ಒದಗಿಸಬೇಕೆಂದಿದ್ದೇವೆ. ಸೆಂಟ್ರಲ್ ಆಸ್ಪತ್ರೆಗೆ 10 ಸಾವಿರ ರೂಪಾಯಿಗಳ ಔಷಧಿ ನರಬರಾಯಿ ಮಾಡಬೇಕೆಂದಿದ್ದೇವೆ, ಇದುವರೆಗೆ ಪ್ರತಿಯೊಂದು ಆಸ್ಪತ್ರೆಗೂ ಔಷಧಿಗಳನ್ನು ಮಾರ್ಚಿಯಲ್ಲಿ ಕೊಳ್ಳುತ್ತಿದ್ದರು, ಇನ್ನುಮೇಲೆ ಡಿಸೆಂಬರಿನಲ್ಲೇ ಕೊಳ್ಳಬೇಕು, ಕೊಂಡು ನರಬರಾಜು ಮಾಡಬೇಕು ಎಂದು ಸ್ಟೀಮಲ್ಟೇನ ಮಾಡಿ ಇದರ ಬಗ್ಗೆ ಗವರ್ನಮೆಂಟ್ ಆರ್ಡರ್ ಮಾಡಲಾಗಿದೆ.

ಶ್ರೀ ವಿ. ಎನ್. ಪಾಟೀಲ್.—ಚ್ಯೆಲ್ಡ ವೆಲ್‌ಫೇರ್, ಎಪಿಡೆಮಿಕ್ಸ್, ಪೋಲಿಯೋ, ಟಿಬಿ. ಕಾಲರ ಮುಂತಾದುವುಗಳಿಗೆ ತಾಲ್ಲೂಕುಗಳಲ್ಲಿ ಅರೇಂಜಮೆಂಟ್ ಮಾಡಿದೆಯೆ ?

Sri H. SIDDAVEERAPPA.—That is our aim. It has been taken up as a National Plan so that the drugs and various other preventive measures to look after the health of the childern. We want to extend to rural areas also through the PSC and it will not be confined only to the urban areas.

ಶ್ರೀ ಜಿ. ಪುಟ್ಟಸ್ವಾಮಿ.—ಈಗ 2-3-1973ರಲ್ಲಿ ಹಣವನ್ನು ಹಂಚಿರುವ ಪ್ರಕಾರ ಯಾವರೀತಿ ಹಂಚಲಾಗಿದೆ ಎಂಬುದನ್ನು ತಿಳಿಸುವಿರಾ ?

ಶ್ರೀ ಎಚ್. ಸಿದ್ದವೀರಪ್ಪ.—ಆ ವಿವರವಿಲ್ಲ. ಸರಿಯಾಗಿ ಅನೇಕ ಕಡೆ ಕೆಲಸ ನಡೆಯುತ್ತಿದೆಯೆಂದು ಗೊತ್ತಾಗಿದೆ. ಕೆಲವು ಆಸ್ಪತ್ರೆಗಳಲ್ಲಿ ತೊಂದರೆಯಾಗಿರಬಹುದು. ಈ ಅನ್ಯಾಯವನ್ನು ಸರಿಪಡಿಸಲು ಸ್ಟೀಮಲ್ಟೇನ್ ಮಾಡಿ ಒಂದು ಹೈ ಪವರ್ ಕಮಿಟಿ ಮಾಡಿ ಅದಕ್ಕೆ ಒಬ್ಬ ಜಾಯಿಂಟ್ ಡೈರೆಕ್ಟರ್ ಮುಂತಾದವನ್ನು ಹಾಕಿದೆ. ಹೆಲ್ತ್ ಇಲಾಖೆ ಸೆಕ್ರೆಟರಿಯವರು ಅದರ ಛೇರ್ಮನ್ ಆಗಿದ್ದಾರೆ. ಔಷಧಿಗಳ ನರಬರಾಜಿನ ವಿಷಯದಲ್ಲಿ ಆದಷ್ಟು ಅನ್ಯಾಯವಾಗದ ಹಾಗೆ ನೋಡಿಕೊಳ್ಳಬೇಕು ಎಂದು ಸಂಬಂಧಪಟ್ಟ ಸಮಿತಿಗೆ ತಿಳಿಸಲಾಗಿದೆ.

1-30 P.M.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಸ್ವಾಮಿ ತಾವು 2-3-1973ರಂದು ಒಂದು ಆಜ್ಞೆಯನ್ನು ಹೊರಡಿಸಿದ್ದೇವೆ ಎಂದು ತಾರೀಖನ್ನು ಕೊಟ್ಟಿದ್ದೀರಿ, ಮೊನ್ನೆ ರಜಾ ಇದ್ದು ಆಗಲೂ ಕೂಡ ನಮ್ಮ ಜಿಲ್ಲೆಯ ಆಸ್ಪತ್ರೆಗಳಿಗೆ ಔಷಧಿ ಬೇಕು ಎಂದು ಕೇಳಿದ್ದಾರೆ. ಅಲ್ಲ ಔಷಧಿಗಳೆ ಸ್ಟೀರ್ಪಿಟಿ ಇದೆ, ಪೇಷಂಟ್ಸ್‌ಗಳಿಗೆ ಔಷಧಿಯಿಲ್ಲದ ಆಸ್ಪತ್ರೆಗಳು ಇವೆ. 60 ಸಾವಿರ ರೂಪಾಯಿಗಳನ್ನು ಶಿವಮೊಗ ಜಿಲ್ಲೆಗೆ ಇದಕ್ಕಾಗಿ ಒದಗಿಸಿದ್ದೇವೆಂದು ಹೇಳಿದ್ದೀರಿ. ಆದರೆ ಶಿವಮೊಗ್ಗ ಜಿಲ್ಲೆಯಲ್ಲ ಅನೇಕ ಆಸ್ಪತ್ರೆಗಳಲ್ಲ ಔಷಧಿಯಿಲ್ಲ ಎಂದು ಹೇಳುತ್ತಾರೆ. ಇದಕ್ಕೆ ತಾವು ಏನುಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಎಚ್. ಸಿದ್ದವೀರಪ್ಪ.—ವಿಚಾರ ಮಾಡುತ್ತೇನೆ, ಸುಳ್ಳು ಹೇಳಿದ್ದರೆ ಅವರಿಗೆ ಶಿಕ್ಷೆ ಮಾಡುತ್ತೇನೆ.

Bijur Irrigation Scheme

554. Sri A. G. KODGI (Baindur).—

Will the Minister of State for Major Irrigation be pleased to state.—

(*a*) the expenditure incurred so far in respect of the Bijur Irrigation Scheme in South Kanara District ;

(*b*) the policy of the Government regarding the implementaiton of the Scheme ?

Sri H. N. NANJE GOWDA (Minister of State for Major Irrigation).—

(*a*) Rs. 2.66 lakhs.

(*b*) Its estimate is under consideration.

ಶ್ರೀ ಎ. ಜಿ. ಕೊಡಗಿ.—ತಮ್ಮ ಉತ್ತರದಲ್ಲಿ 2.66 ಲಕ್ಷ ರೂಪಾಯಿಗಳು ಖರ್ಚಾಗಿಧೆ ಎಂದು ಹೇಳಿದ್ದೀರಿ, ಎಂದಿನಿಂದ ಯಾವ ಬಾಬಿಗೆ ಇಷ್ಟು ಖರ್ಚಾಗಿದೆ ಎಂದು ಏವರ ಹೇಳುತ್ತೀರಾ ?

† ಶ್ರೀ ಎಚ್. ಎನ್. ನಂಜೇಗೌಡ.—1962ನೇ ಇಸವಿಯಿಂದ ಇಲ್ಲಿಯವರೆಗೆ ಇಷ್ಟು ಖರ್ಚಾಗಿದೆ ಪ್ರಿಲಿಮಿನರಿ ವರ್ಕ್ಸ್ ಮಾಡಿದ್ದಾರೆ. ಅವಕ್ಕೆ ಈ ದುಡ್ಡನ್ನು ಖರ್ಚು ಮಾಡಿದ್ದಾರೆ. ಎಸ್ಟಿಮೇಟ್ಸ್ ಸರ್ಕಾರದ ವತಿಗೆ ಬಂದಿದೆ, ಅದನ್ನು ಪರಿಶೀಲನೆ ಮಾಡುತ್ತೇವೆ.

ಶ್ರೀ ಎ.ಜಿ. ಕೊಡಗಿ.–1962ನೇ ಇಸವಿಯಿಂದ ಪ್ರಿಲಿಮಿನರಿ ವರ್ಕ್ಸ್‌ಗೆ 2.66 ಲಕ್ಷ ರೂಪಾಯಿ ಖರ್ಚಾಗಿದೆ, ಇದರ ಅಂದಾಜು ಪರಿಶೀಲನೆಯಲ್ಲಿದೆ ಎಂದು ಹೇಳಿದಿರಿ. 21 ವರ್ಷಕಾಲ ಕಳೆದರೂ ಕೂಡ ಪರಿಶೀಲನೆಯಲ್ಲಿನೆ ಎಂದು ತಾವು ಹೇಳುತ್ತಾ ಇದ್ದೀರಿ, ಇದರ ಆರ್ಥ ಏನು ? ಎಂದು ಗೊತ್ತಾಗುತ್ತಾ ಇಲ್ಲ. ಯಾವಾಗ ಇದರ ಅಂತ್ಯ ಪರಿಶೀಲನೆಯಾಗಬೇಕು, ಇದರ ಬಗ್ಗೆ ಸರ್ಕಾರದ ಧೋರಣೆ ಏನು ?

ಶ್ರೀ ಎಚ್. ಎನ್. ನಂಜೇಗೌಡ.—1952ರಿಂದ ಅಲ್ಲ 1962ರಿಂದ 13 ವರ್ಷ, 2ಲಕ್ಷ 25 ಸಾವಿರ ರೂಪಾಯಿಗಳ ಎಸ್ಟಿಮೇಟ್ ಸರ್ಕಾರದ ಮುಂಜೂರಾತಿ ಪಡೆದಿದೆ, ಟೆಂಡರ್ ಹಾಕುವ ವೇಳೆ ಬದಲಾವಣೆಯಾಗಿದೆ. ತಾಂತ್ರಿಕ ಕಮಿಟಿಯವರು 134 ಲಕ್ಷ ರೂಪಾಯಿಗಳಿಗೆ ಬದಲಾವಣೆ ಮಾಡಿದ್ದು ಪುನಃ ಟೆಂಡರ್ ಕರೆದರು. ಪುನಃ ವ್ಯತ್ಯಾಸವಾಯಿತು. ಅಂದಾಜು ವ್ಯತ್ಯಾಸವಾಗಿ ಸ್ಪೀಕಾರ ಮಾಡದೆ 134 ಲಕ್ಷ ರೂಪಾಯಿ ಎಸ್ಟಿಮೇಟ್ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. 134 ಲಕ್ಷ ರೂಪಾಯಿಗಳ ಕೆಲಸ ಎಂದರೆ, ಹಣದ ಫೀಪಿಬಿಲಿಟಿ ಅರ್ಥಮಾಡಿಕೊಂಡು ಈ ಕೆಲಸವನ್ನು ಕೈಗೊಳ್ಳಬೇಕಾಗುತ್ತದೆ.

ಶ್ರೀ ಕೆ. ಯಂಕಟಪ್ಪ.—13ವರ್ಷದಿಂದ ಪ್ರಿಲಿಮಿನರಿ ವರ್ಕ್ಸ್‌ಗೋಸ್ಕರ ಇಷ್ಟು ದುಡ್ಡುಖರ್ಚಾಗಿದೆ ಎಂದು ಹೇಳಿದಿರಿ, ಇಷ್ಟು ಖರ್ಚಾದಮೇಲೆ, ಈ ಯೋಜನೆ ಅವಶ್ಯಕವಾಗಿ ಆಗಲೇಬೇಕು; ಎನ್ನುವುದು ತಮ್ಮ ಗಮನದಲ್ಲಿದೆಯೇ ?

ಶ್ರೀ ಎಚ್. ಎನ್. ನಂಜೇಗೌಡ.—ನೀರಾವರಿ ಪ್ರದೇಶ ಎಷ್ಟಾಗುತ್ತದೆ, ದುಡ್ಡು ಎಷ್ಟು ಹೋಗುತ್ತದೆ, ಇದು ಸೂಕ್ತವೇ ಅಲ್ಲವೇ ಎಂದು ಯೋಚನೆ ಮಾಡಿ ಸರ್ಕಾರ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಮಾಡಲೇಬೇಕು ಎಂದು ತೀರ್ಮಾನ ಕೈಗೊಂಡ ಮೇಲೆ ಹಣದ ಪರಿಸ್ಥಿತಿ ಆರ್ಥ ಮಾಡಿಕೊಳ್ಳಬೇಕಾಗುತ್ತದೆ. ಅದೆಲ್ಲ ಅರ್ಥಮಾಡಿಕೊಂಡು ತೀರ್ಮಾನ ಕೈಗೊಳ್ಳಬೇಕಾಗುತ್ತದೆ.

ಶ್ರೀ ಎ. ಜಿ. ಕೊಡಗಿ.—ವರ್ಷ ವರ್ಷ ವೆಚ್ಚ ಹೆಚ್ಚುತ್ತಾ ಇರುವುದನ್ನು ಗಮನಕ್ಕೆ ತಂದಿದ್ದಾರೆ. ಯೋಜನೆಯ ಅವಶ್ಯಕತೆ ಇದೆಯೇ ಇಲ್ಲವೇ ಎಂದು ನಿರ್ಧಾರಕ್ಕೆ ಬಂದು ಶೀಘ್ರವಾಗಿ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ. ?

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೀರಾವರಿಗೆ ಯಾವ ಹಣವನ್ನೂ ಅಲ್ಲಿ ವೆಚ್ಚ ಮಾಡಿಲ್ಲ ಈ ಯೋಜನೆಯ ಅಗತ್ಯವಿದೆ ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡು ಶೀಘ್ರವಾಗಿ ಕ್ರಮತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎನ್. ನಂಜೇಗೌಡ.—ಸರ್ಕಾರಕ್ಕೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾರಿ ಬಾರಿ ಯೋಜನೆಯನ್ನು ತೆಗೆದುಕೊಂಡಿಲ್ಲ ಎಂದು ಗಮನದಲ್ಲಿದೆ. ಈ ದೃಷ್ಟಿಯಿಂದ ನಿಖರವಾದ ಯೋಜನೆ ಇದ್ದರೆ ಅದನ್ನು ಕೈಗೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನುತಕ್ಕ ಮಾತನ್ನು ಹೇಳುತ್ತೇನೆ.